ಮೂಲ ದಾವಾ ನಂ: 156/2021
ಪಿ.ಡಬ್ಲ್ಯೂ-1

**ದಿ: 9.4.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಕೆ.ಜಿ.ಎಸ್ ವಕೀಲರಿಂದ**

ನಾನು 1989 ರಲ್ಲಿ ಜನಿಸಿರುತ್ತೇನೆ. ನನ್ನ ತಂದೆ ನಾಗಯ್ಯ 2011 ರಲ್ಲಿ ತೀರಿಹೋಗಿರುತ್ತಾರೆ. ನನ್ನ ತಂದೆ ಅಡತಿ ಅಂಗಡಿಯಲ್ಲಿ ಗುಮಾಸ್ತರಿದ್ದರು. ದಾವಾ ಆಸ್ತಿಯ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಇರುತ್ತದೆ ಎಂದರೆ ಸರಿ. ನನ್ನ ತಂದೆ ದಾವಾ ಆಸ್ತಿಯನ್ನು ಅಂದರೆ ಒಂದು ಗುಂಟೆ ಜಾಗವನ್ನು ಹಣಮಂತರಾಯ ಬಿರಾದಾರ ಮತ್ತು ಸಂಗಪ್ಪ ಬಿರಾದಾರ ಎನ್ನುವವರ ಕಡೆಯಿಂದ ಖರೀದಿ ತೆಗೆದುಕೊಂಡಿರುತ್ತಾರೆ. ದಾವಾ ಆಸ್ತಿಯ ಚಕಬಂದಿ ಪೂರ್ವಕ್ಕೆ: ಹಣಮಂತರಾಯ ಧನ್ನೂರರವರ ಗುಂಟೆ ಜಾಗ, ಪಶ್ಚಿಮಕ್ಕೆ: ಅಡಿವೆಪ್ಪ ನಾಡಗೌಡರವರ ಗುಂಟೆ ಜಾಗ, ಉತ್ತರಕ್ಕೆ: ರಸ್ತೆ ಮತ್ತು ದಕ್ಷಿಣಕ್ಕೆ: ಹಣಮಂತರಾಯ ಬಿರಾದಾರರವರ ಜಮೀನು ಇರುತ್ತದೆ.

2. ನನ್ನ ತಂದೆ ಗುಂಟಾ ಜಾಗೆಯನ್ನು ಖರೀದಿ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಆ ಪ್ರಕಾರ ಗುಂಟಾ ಜಾಗೆಯ ಹ.ರ ಉತಾರೆಗಳಲ್ಲಿ ಎಲ್ಲರ ಹೆಸರು ನಮೂದು ಇರುತ್ತವೆ ಎಂದರೆ ಸರಿ. ದಾವಾ ಆಸ್ತಿಯ ಪೋಟೋಗಳನ್ನು ಹಾಜರಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ, ಆದರೆ ನಕ್ಷೆ ಹಾಜರಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನಕ್ಷೆಯನ್ನು ಹಾಜರಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಇದ್ದ ಕಾರಣ, ದಾವಾ ಆಸ್ತಿಯನ್ನು ನನ್ನ ತಂದೆ ತನ್ನ ಮನಸ್ಸಿಗೆ ತಕ್ಕಂತೆ ವಹಿವಾಟು ಮತ್ತು ಉಪಭೋಗ ಮಾಡುತ್ತಿದ್ದರು ಎಂದರೆ ಸರಿ.

3. ದಿ: 28.4.1998 ರಲ್ಲಿ ನನ್ನ ತಂದೆ ದಾವಾ ಆಸ್ತಿಯ ಒಂದು ಗುಂಟೆ ಪೈಕಿ ಅರ್ಧ ಗುಂಟೆ ಜಾಗವನ್ನು ಪ್ರತಿವಾದಿಗೆ ನೋಂದ ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ

ಗೊತ್ತಿಲ್ಲ. ದಾವಾ ಆಸ್ತಿಯ ಅರ್ಧ ಗುಂಟೆಯ ಜಾಗೆಯಲ್ಲಿ ಪ್ರತಿವಾದಿ ಕಬ್ಜೆಯಲ್ಲಿರುತ್ತಾನೆ ಎಂದರೆ ಸಾಕ್ಷಿಯು ನಾವೂ ಸಹ ಇರುತ್ತೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಮುದ್ದೇಬಿಹಾಳ-ನಾರಾಯಣಪೂರ ರಾಜ್ಯ ಹೆದ್ದಾರಿಗೆ ಹೊಂದಿಕೊಂಡು ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯು ರಾಜ್ಯ ಹೆದ್ದಾರಿಗೆ ಹೊಂದಿಕೊಂಡು ಇದ್ದ ಕಾರಣ ಅದು ಈಗ ಹೆಚ್ಚಿಗೆ ಬೆಲೆಬಾಳುತ್ತಿದ್ದು, ಅದನ್ನು ಸಹಿಸಿಕೊಳ್ಳಲಾರದ ಕಾರಣ ನಾನು ಪ್ರತಿವಾದಿಯ ವಿರುದ್ಧ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯಲ್ಲಿ ನಾನು ಕಲ್ಲು, ಮಣ್ಣು, ಕಟ್ಟಿಗೆ ಇಟ್ಟಿದ್ದು, ಅದಕ್ಕೆ ಪ್ರತಿವಾದಿ ಹರಕತ್ ಮಾಡಿರುತ್ತಾನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಕಬ್ಜೆಯಲ್ಲಿ ಪ್ರತಿವಾದಿ ಇರುತ್ತಾನೆ ಎಂದರೆ ಸರಿಯಲ್ಲ. ನನ್ನ ತಂದೆ ಗ್ರಾಮ ಪಂಚಾಯತಿ ಆಸ್ತಿ ನಂಃ 2/3 ನ್ನು ಪಂಚಾಯತಿಯಲ್ಲಿ ನೋಂದ ಮಾಡಿಕೊಂಡು, ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.

ಓ ಹೇ ಕೇ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಮುದ್ದೇಬಿಹಾಳ.